**ಒ ಎಸ್ ನಂ. 69/2022**
**ಡಿ ಡಬ್ಲ್ಯೂಃ 02**

**ದಿಃ 27-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಟಿ ಟಿ ವಕೀಲರಿಂದಃ**

ನನಗೆ ವಾದಿಯರ ಪರಿಚಯ ಇದೆ. ನನಗೆ ದಾವಾ ಆಸ್ತಿಗಳ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲ. ದಾವಾ ಆಸ್ತಿಗಳು ಹೇಗೆ ಬಂದಿವೆ, ಯಾರಿಂದ ಬಂದಿವೆ ಎನ್ನುವದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನಾನು ಈ ಹಿಂದೆ ಯಾವುದೆ ವ್ಯವಹಾರ ಮಾಡಿಲ್ಲ. ದಾವಾ ಆಸ್ತಿ ಮನೆ ಬಗ್ಗೆ ಈ ಹಿಂದೆ ಆದ ದಾಖಲೆಗಳ ಬಗ್ಗೆ ನನಗೆ ಗೊತ್ತಿಲ್ಲ. 2016 ರಲ್ಲಿ ಮನೆ ಆಸ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿರುವ ಹಕ್ಕು ಬಿಟ್ಟ ಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಮುಗಿದಿದೆ ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ. ಹಕ್ಕು ಬಿಟ್ಟ ಪತ್ರವನ್ನು ಯಾವ ವಿಷಯವಾಗಿ ಬರೆದಿರುತ್ತಾರೆ ಅದರಲ್ಲಿ ಏನು ಬರೆದಿದ್ದಾರೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೆ ವ್ಯವಹಾರ ಆಗಿರುವುದಿಲ್ಲ. ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ.

**ಒ ಎಸ್ ನಂ. 69/2022**
**ಡಿ ಡಬ್ಲ್ಯೂಃ 02**

ನನಗೆ ಓದಲು ಬರೆಯಲು ಬರುವುದಿಲ್ಲ, ಆದರೆ ನನಗೆ ಪ್ರಮಾಣ ಪತ್ರವನ್ನು ಓದಿ ಹೇಳಿದ್ದರೆ. ನಾನು ವಾದಿಯರನ್ನು ಇದೆ ಮೊದಲ ಬಾರಿಗೆ ನೋಡಿದ್ದೇನೆ. ವ್ಯವಹಾರಕ್ಕೆ ಸಂಬಂಧಿಸಿದಂತೆ ವಾದಿಯರನ್ನು ಎಲ್ಲಿಯೂ ಒಂದೆ ಸಲ ನೋಡಿಲ್ಲ. ನಾನು ಹಕ್ಕು ಬಿಟ್ಟ ಪತ್ರ ಬರೆದ ಕಂಪ್ಲಿ ವಕೀಲರನ್ನು ಈ ಹಿಂದೆ ನೋಡಿಲ್ಲ. ಪ್ರತಿವಾದಿಯರು ಹೇಳಿದ್ದರಿಂದ ನಾನು ಸಾಕ್ಷಿ ಹೇಳುತ್ತಿದ್ದೇನೆ. ಪ್ರತಿವಾದಿಯರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.